RNU AIR DHARWAD

## MARCH 19, 2025
## AKASHAVANI - DHARWAD
## PRADESH SAAMACHARA (KANNADA) 12.00 P.M.

ನಾಡಿದ್ದು ಅಂದರೆ 21 ರಿಂದ ಏಪ್ರಿಲ್ 4 ರವರೆಗೆ, ರಾಜ್ಯಾದ್ಯಂತ ಎಸ್.ಎಸ್.ಎಲ್.ಸಿ. ಪರೀಕ್ಷೆಗಳು ನಡೆಯಲಿವೆ. ಸುಗಮ ಪರೀಕ್ಷೆ ನಡೆಸಲು ಅಗತ್ಯ ಸಿದ್ಧತೆಗಳು ಮತ್ತು ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳಲಾಗಿದೆ. ಕಿತ್ತೂರು ಕರ್ನಾಟಕ ಶೈಕ್ಷಣಿಕ ವಲಯದ, 9 ಜಿಲ್ಲೆಗಳಿಂದ, ಒಟ್ಟು 2 ಲಕ್ಷ 41 ಸಾವಿರದ 150 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಲಿದ್ದಾರೆ. ನಿಗದಿತ ದಿನದಂದು ಪರೀಕ್ಷೆಗಳು, ಬೆಳಗ್ಗೆ 10 ರಿಂದ ಮಧ್ಯಾಹ್ನ 1:15ರ ವರೆಗೆ ಆಯೋಜಿತವಾಗಿವೆ. ಪರೀಕ್ಷೆಗಳ ಲೈವ್ ವೆಬ್ ಸ್ಟ್ರೀಮಿಂಗ್‌ಗಾಗಿ, ಎಲ್ಲ ಜಿಲ್ಲಾ ಪಂಚಾಯ್ತಿಗಳಲ್ಲಿ, ವೆಬ್ ಕಾಸ್ಟಿಂಗ್ ಕೇಂದ್ರವನ್ನು ಸ್ಥಾಪಿಸಲಾಗಿದೆ. ತನ್ಮೂಲಕ, ಪರೀಕ್ಷಾ ಕೇಂದ್ರಗಳ ಮೇಲೆ ಜಿಲ್ಲಾಡಳಿತಗಳು ನಿರಂತರ ನಿಗಾವಹಿಸಲಿವೆ. ಪರೀಕ್ಷೆಗೆ ಸಂಬಂಧಿಸಿದ ಒತ್ತಡಗಳಿದ್ದರೆ, ವಿದ್ಯಾರ್ಥಿ ಅಥವಾ ಪಾಲಕರು, ಶುಲ್ಕ ರಹಿತ ದೂರವಾಣಿ ಸಂಖ್ಯೆ 1-4-4-1-6 'ಟೆಲಿ ಮನಸ್'ಗೆ ಕರೆ ಮಾಡಿ, ಪರಿಹಾರ ಕಂಡುಕೊಳ್ಳಬಹುದು.

<><><>

ಬಳ್ಳಾರಿ ಜಿಲ್ಲೆಯಾದ್ಯಂತ ಬೆಳೆದು ನಿಂತಿರುವ ಭತ್ತದ ಬೆಳೆಗೆ, ತುಂಗಭದ್ರಾ ಬಲದಂಡೆ ಕೆಳ ಮಟ್ಟದ ಕಾಲುವೆ ಮೂಲಕ, ಏಪ್ರಿಲ್ 10 ರವರೆಗೆ, ನೀರು ಹರಿಸುವಂತೆ, ತುಂಗಭದ್ರಾ ರೈತ ಸಂಘದ ಅಧ್ಯಕ್ಷ, ದರೂರು ಪುರು ೋತ್ತಮ ಗೌಡ, ಸರ್ಕಾರಕ್ಕೆ ಮನವಿ ಮಾಡಿದ್ದಾರೆ.

<><><>

ನಾರಾಯಣಪುರ ಜಲಾಶಯದಿಂದ ರೈತರ ಹಿಂಗಾರು ಬೆಳೆಗೆ ಏಪ್ರಿಲ್ 15 ರವರೆಗೆ, ನೀರು ಹರಿಸುವಂತೆ, ಮಾಜಿ ಸಚಿವ ರಾಜುಗೌಡ ನೇತೃತ್ವದ ನಿಯೋಗ, ಯಾದಗಿರಿ ಜಿಲ್ಲೆ, ಹುಣಸಗಿ ತಾಲೂಕಿನ ನಾರಾಯಣಪುರ ಗ್ರಾಮದ, ಮುಖ್ಯ ಎಂಜಿನಿಯರ್‌ಗೆ ಮನವಿ ಮಾಡಿದೆ.

<><><>

ರಾಜ್ಯಾದ್ಯಂತ ಬಿಸಿಲಿನ ಬೇಗೆ ಹೆಚ್ಚುತ್ತಿದ್ದು, ಪ್ರಸ್ತುತ ವಿಜಯಪುರ ಜಿಲ್ಲೆಯಲ್ಲಿ 40 ಡಿಗ್ರಿ ವರೆಗೆ ತಾಪಮಾನ ದಾಖಲಾಗಿದೆ. ಜಿಲ್ಲೆಯಲ್ಲಿ ಬಿಸಿ ಗಾಳಿ ಬೀಸುತ್ತಿರುವ ಹಿನ್ನೆಲೆ, ಜಿಲ್ಲಾಡಳಿತ ಕೈಗೊಂಡಿರುವ ಮುನ್ನೆಚ್ಚರಿಕೆ ಕ್ರಮಗಳ ಕುರಿತು ಜಿಲ್ಲಾಧಿಕಾರಿ ಟಿ. ಭೂಬಾಲನ್ ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ.

ಧ್ವನಿ- ಜಿಲ್ಲಾಧಿಕಾರಿ ಟಿ. ಭೂಬಾಲನ್- 42 ಸೆಕೆಂದುಗಳು

<><><>

ದಕ್ಷಿಣಕನ್ನಡ ಜಿಲ್ಲೆಯ, ಬೆಳ್ತಂಗಡಿ ತಾಲೂಕಿನ, ದಟ್ಟ ಕಾಡಿನ ನಡುವೆ ಬದುಕುತ್ತಿರುವ, 28 ಮಲೆಕುಡಿಯ ವನವಾಸಿ ಕುಟುಂಬಗಳಿಗೆ, ಸದ್ಯದಲ್ಲೇ ವಿದ್ಯುತ್ ಭಾಗ್ಯ ದೊರೆಯಲಿದೆ ಎಂದು, ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದ್ದಾರೆ. ಈ ಕುರಿತು ಎಕ್ಸ್ ಜಾಲತಾಣದಲ್ಲಿ ಮಾಹಿತಿ ನೀಡಿರುವ ಅವರು, ಸ್ವಾತಂತ್ರ್ಯ ಬಂದು, 77 ವರ್ಷಗಳ ಬಳಿಕ, ಈ ಕುಟುಂಬಗಳಿಗೆ ವಿದ್ಯುತ್ ಭಾಗ್ಯ ದೊರೆಯುತ್ತಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಎಲ್ಲ ಇಲಾಖೆಗಳೊಂದಿಗೆ ಹಲವು ಸಭೆಗಳನ್ನು ನಡೆಸಿ, ಆದಿವಾಸಿಗಳಿಗೆ ಮೂಲಸೌಕರ್ಯ ಕಲ್ಪಿಸಲು ಸೂಚಿಸಿದ ಹಿನ್ನೆಲೆ, ವನವಾಸಿ ಬಂಧುಗಳ ಕಲ್ಯಾಣ ಸಾಧ್ಯವಾಗಿದೆ ಎಂದಿದ್ದಾರೆ.

<><><>

75 ವರ್ಷ ಪೂರೈಸಿರುವ ಆಕಾಶವಾಣಿ ಧಾರವಾಡ ಕೇಂದ್ರದ, ಸಾರ್ವಜನಿಕ ಪ್ರಸಾರ ಸೇವೆಯನ್ನು ಸ್ಮರಣೀಯವಾಗಿಸಿದ ಘಟನಾವಳಿಗಳ, ಶಬ್ದಚಿತ್ರ 'ಅಮರವಾಣಿಯ ಅಮೃತ ಘಳಿಗೆ' ಸ್ಮರಣ ಸಂಚಿಕೆ, ಪ್ರದಾನ ಕಾರ್ಯಕ್ರಮ ನಾಳೆ ಬೆಳಿಗ್ಗೆ 11 ಗಂಟೆಗೆ, ಆಕಾಶವಾಣಿ ಕೇಂದ್ರದ ಶಾಲ್ಮಲಾ ಸಭಾಂಗಣದಲ್ಲಿ, ಆಯೋಜಿತವಾಗಿದೆ. ನ್ಯೂಯಾರ್ಕ್‌ನ ಶ್ರೀಮತಿ ಜಯಾ ಹಾಗೂ ಶ್ರೀ ರವಿಶಂಕರ ಭೋಪಳಾಪುರ ಪ್ರತಿಷ್ಠಾನದ ಸಹಕಾರದಲ್ಲಿ ಮೂಡಿಬಂದ ಸಂಚಿಕೆಯನ್ನು, ಧಾರವಾಡದ ಮಾಹಿತಿ ತಂತ್ರಜ್ಞಾನ ಸಂಸ್ಥೆ–ಟ್ರಿಪಲ್ ಐಟಿ ಸಾರ್ವಜನಿಕ ಸಂಪರ್ಕಾಧಿಕಾರಿ ಡಾಕ್ಟರ್ ಕೆ.ಗೋಪಿನಾಥ ಪ್ರದಾನ ಮಾಡಿ, ಶ್ರಮಿಸಿದ ಸಿಬ್ಬಂದಿಗೆ ಗೌರವ ಅರ್ಪಿಸಲಿದ್ದಾರೆ. ತಾಂತ್ರಿಕ ವಿಭಾಗದ ಉಪ ಮಹಾನಿರ್ದೇಶಕ ಅರುಣ ಪ್ರಭಾಕರ್,

ಕಾರ್ಯಕ್ರಮ ಮುಖ್ಯಸ್ಥ ಶರಣಬಸವ ಚೋಳಿನ, ಕಾರ್ಯಕ್ರಮ ನಿರ್ವಾಹಕಿ ಮಂಜುಳಾ ಪುರಾಣಿಕ ಹಾಗೂ ಮಾಹಿತಿ ಅಧಿಕಾರ ಕೆ.ಶಿವರಾಜ ಸೇರಿದಂತೆ, ನಿಲಯದ ಅಧಿಕಾರಿಗಳು, ಸಿಬ್ಬಂದಿ ಪಾಲ್ಗೊಳ್ಳಲಿದ್ದಾರೆ.

<><><>

ಧಾರವಾಡ ಕೃಷಿ ವಿಶ್ವವಿದ್ಯಾಲಯದ, ಪ್ರಥಮ ಉಪ ಕುಲಪತಿಗಳಾಗಿದ್ದ, ಅಂತಾರಾಷ್ಟ್ರೀಯ ಖ್ಯಾತಿಯ, ಸಸ್ಯತಳಿ ವಿಜ್ಞಾನಿ, ಪ್ರೊಫೆಸರ್ ಜೆ.ವಿ.ಗೌಡ ಅವರ ಪಾರ್ಥಿವ ಶರೀರದ ಅಂತಿಮ ದರ್ಶನಕ್ಕೆ, ಇಂದು ಮಧ್ಯಾಹ್ನ **1** ಗಂಟೆಯ ವರೆಗೆ, ವಿಶ್ವವಿದ್ಯಾಲಯದ ಆವರಣದಲ್ಲಿ ವ್ಯವಸ್ಥೆ ಮಾಡಲಾಗಿದೆ. ಅಂತ್ಯಕ್ರಿಯೆ, ಇಂದು ಮಧ್ಯಾಹ್ನ **2.30** ಕ್ಕೆ ಧಾರವಾಡದಲ್ಲಿ ಜರುಗಲಿದೆ. ಬಳ್ಳಾರಿ ಜಿಲ್ಲೆ, ಸಂಡೂರು ತಾಲೂಕು, ಜಿಗೇನಹಳ್ಳಿಯಲ್ಲಿ ಜನಿಸಿದ್ದ ಡಾಕ್ಟರ್ ಗೌಡ, ಭಾರತ ರತ್ನ ಪ್ರೊಫೆಸರ್ ಎಂ.ಎಸ್.ಸ್ವಾಮಿನಾಥನ್ ಅವರ ಮಾರ್ಗದರ್ಶನದಲ್ಲಿ, ಐ.ಸಿ.ಎ.ಆರ್. ಫೆಲೋಶಿಪ್‌ನೊಂದಿಗೆ ಪಿ.ಎಚ್‌ಡಿ ಹಾಗೂ ಪೋಸ್ಟ್ ಡಾಕ್ಟರೇಟ್ ಪದವಿ ಪಡೆದ, ಶ್ರೇಷ್ಠ ಕೃಷಿ ವಿಜ್ಞಾನಿ.

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>**END**<><><>